T. A. and D. A. drawn by Ministers, State Ministers and Deputy Ministers

560. Sri M. MALLAPPA (Birur).—

Will the Chief Minister be pleased to state :—

(*a*) the amount of T.A. and D.A. drawn by each of the Ministers, State Ministers and Deputy Ministers after the formation of new Ministry in the State ;

(*b*) monthwar details of T.A. and D.A. drawn by each of them ?

Sri VEERENDRA PATIL (Chief Minister).—

(*a*) A statement is placed on the Table of the House.

(*b*) A statement is placed on the Table of the House.

Here the information furnished to the Hon. Members is up to the end of December 1968 ; not the latest information.

Sri M. MALLAPPA.—The Hon. Chief Minister has furnished a big list showing the enormous expenditure incurred by the Ministers, Ministers of State and Deputy Ministers. Is it not desirable to put a ceiling on the expenditure to be incurred towards T.A. and D.A. and save money so that it may be used for better purpose ?

Sri VEERENDRA PATIL.—We are trying our best to avoid these tours. Wherever it is avoidable, we are trying to avoid. But in democracy, it is very difficult to say that Ministers should not tour or should tour only for a particular number of days and should not exceed a particular amount of expenditure ; if we say so, it becomes very difficult in practical working. We are aware of the criticisms and we are taking all precautions to see that avoidable tours are not undertaken.

ಶ್ರೀ ಎಂ. ಮಲ್ಲಪ್ಪ.—ತಾಲ್ಲೂಕ್ ಬೋರ್ಡಿನ ಚುನಾವಣೆಯಾದ ಕಾಲಕ್ಕೆ ಮಂತ್ರಿಗಳು ಹೆಚ್ಚಿನ ಪ್ರವಾಸ ಮಾಡಿ ಹೆಚ್ಚು ಟಿ. ಎ. ಮತ್ತು ಡಿ. ಎ. ಪಡೆದಿದ್ದಾರೆ ಎಂಬುದನ್ನು ಒಪ್ಪುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಿಗೇ ಗೊತ್ತಿದೆ, ಆ ಸಮಯದಲ್ಲಿ ಯಾವ ಯಾವ ಮಂತ್ರಿಗಳು ಅಫಿಷಿಯಲ್ ಟೂರ್ ಹೋಗಿ ಟಿ. ಎ. ಮತ್ತು ಡಿ. ಎ. ಪಡೆದಿದ್ದಾರೆ ಎಂಬುದು. ಹಿಂದೆ ಕೂಡ ಇದೇ ಪ್ರಶ್ನೆ ಬಂದಾಗ ಉತ್ತರ ಕೊಟ್ಟಿದ್ದೇನೆ. ತಾಲ್ಲೂಕ್ ಬೋರ್ಡಿನ ಚುನಾವಣೆಯ ಸಮಯದಲ್ಲಿ ಮಂತ್ರಿಗಳು ಅಫಿಷಿಯಲ್ ಕ್ಯಪಾಸಿಟಿಯಲ್ಲಿ ಟೂರ್ ಮಾಡಿಲ್ಲ, ಪ್ರೈವೇಟ್ ಕ್ಯಪಾಸಿಟಿಯಲ್ಲಿ ಟೂರ್ ಮಾಡಿದ್ದಾರೆ.

ಶ್ರೀ ಎಸ್. ಶಿವಪ್ಪ.—ಈಗ ಕೊಟ್ಟಿರತಕ್ಕಂಥ ಲಿಸ್ಟ್‌ನಲ್ಲಿ ಮಂತ್ರಿಗಳು ತಮ್ಮ ತಮ್ಮ ಜಿಲ್ಲೆಗೆ ಹೋಗಿ ತಮ್ಮ ಬಂಧುಗಳ ಮದುವೆಯಲ್ಲಿ ಭಾಗವಹಿಸಿ ಊಟಮಾಡಲು ಸರ್ಕಾರದ ಹಣವನ್ನು ಖರ್ಚು ಮಾಡಿದ್ದಾರೆ. ಮತ್ತು ಮಂತ್ರಿಗಳು ಅವರ ಜಿಲ್ಲೆಗೆ ಟೂರ್ ಹೋದಾಗ ಸ್ಥಳೀಯ ಕಾಂಗ್ರೆಸ್ ಕಛೇರಿಗೆ ಹೋಗಿ ಇಲ್ಲದ ಕಿತಾಪತಿಗಳನ್ನು ಮಾಡಿದ್ದಾರೆ. ಈ ರೀತಿ ಟೂರ್ ಮಾಡಿರುವಂಥ ಮಂತ್ರಿಗಳು ಏನು ಹಣ ಪಡೆದಿದ್ದಾರೆ, ಆ ಹಣವನ್ನು ವಾಪಸ್ ಪಡೆಯುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ವಿರೋಧಪಕ್ಷದ ನಾಯಕರು ಹೇಳುವ ಮಾತನ್ನು ಒಪ್ಪುವುದಕ್ಕಾಗುವುದಿಲ್ಲ. ಮಂತ್ರಿಗಳು ತಮ್ಮ ಜಿಲ್ಲೆಗೆ ಹೋಗಬಾರದು ಎಂಬುದನ್ನು ಒಪ್ಪುವುದಕ್ಕಾಗುವುದಿಲ್ಲ. ಮಂತ್ರಿಗಳು ಲಗ್ನಕ್ಕೆ ಹೋಗಲು ಟೂರ್ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಒಪ್ಪಿ

(ಶ್ರೀ ವೀರೇಂದ್ರ ಪಾಟೀಲ್)

ಕೊಳ್ಳುವುದಕ್ಕಾಗುವುದಿಲ್ಲ. ಪ್ರವಾಸದ ನಂದರ್ಭದಲ್ಲಿ ಯಾರಾದರು ಲಗ್ನಕ್ಕೆ ಕರೆದರೆ ಮಂತ್ರಿಗಳು ಹೋಗುವುದರಲ್ಲಿ ತಪ್ಪಿಲ್ಲವೆಂದು ಕಾಣುತ್ತದೆ. ಮತ್ತು ಕಾಂಗ್ರೆಸ್ ಸಂಸ್ಥೆಯ ಕಛೇರಿಗೆ ತಮ್ಮ ಪ್ರವಾಸ ಕಾಲದಲ್ಲಿ ಹೋದರೆ ಏನೂ ತಪ್ಪಾಗುವುದಿಲ್ಲ. ಈ ರೀತಿಯಿಂದ ಹೋಗುತ್ತಿರುವುದು ಇದು ಮೊದಲನೆಯ ಸಲವಲ್ಲ. 1952ರಿಂದಲೂ ಕೂಡ ಇರುವ ಪದ್ಧತಿಯನ್ನು ಅನುಸರಿಸುತ್ತಿದ್ದೇವೆ.

Sri M. RAMAPPA —Is it not true that the Hon. Chief Minister has requested his colleagues not to tour for more than 10 days in a month and that his instructions are not adhered to by the Ministers ?

Sri VEERENDRA PATIL.—That is why I stated already that we have been taking all possible steps to see that avoidable tours are avoided as far as possible. There is some understanding and I have been telling my colleagues that since criticism is made on the floor of the House and elsewhere about tours, it is better to avoid tours as far as possible.

Sri H. SIDDAVEERAPPA.—I have raised an interpellation—only one interpellation in this Session, which has not yet been answered. In the month of July, is it a fact that the Hon. Chief Minister and six or seven of his colleagues toured Chitradurga District for 1½ days in connection with visit of the President of the All-India National Congress who was expected to come and he did not come ? Was it in the interest of the public that a horde of Ministers should have toured the District for 1½ days ?

Sri VEERENDRA PATIL.—I do not know whether he has put that question. I have visited that District but I do not know whether it was in the company of the All-India Congress President. There is no harm if I toured in the company of the All-India Congress President. There is no harm also if any of my Ministers toured in the company of the All-India Congress President. I have toured that area ; there were so many functions and the people there were inviting not only the Chief Minister but also so many other Ministers to attend and participate in some functions in that District and whenever I go, some Ministers accompany me because they belong to that District. There is nothing wrong in that.

ಶ್ರೀ ಪಾಟಾಳ್ ನಾಗರಾಜ್.—ತಾವು ಒಂದು ತಿಂಗಳಿಗೆ ಇಷ್ಟೇ ದಿನ ಟೂರ್ ಹೋಗ ಬೇಕೆಂದು ಮಂತ್ರಿಗಳಿಗೆ ಪರ್ಮಿಷನ್ ಕೊಟ್ಟಿದ್ದಿರಾ ? ಮತ್ತು ಮೈಸೂರು ಪುರಸಭಾ ಚುನಾವಣೆ ಗಳು ಮೈಸೂರಿನಲ್ಲಿ ನಡೆದಾಗ ಮಾನ್ಯ ಮಂತ್ರಿಗಳಾದ ಶ್ರೀ ಪುಟ್ಟಸ್ವಾಮಿಯವರು ರಾಜ್ಯದ ಸ್ಟೇಟು ಕಾರನ್ನುಪಯೋಗಿಸಿಕೊಂಡು ಪ್ರವಾಸ ಮಾಡಿರುವುದು ಸರಿಯೇ ?

ಶ್ರೀ ವೀರೇಂದ್ರ ಪಾಟೀಲ್.—ನಾನಾಗಲೇ ಉತ್ತರ ಹೇಳಿದ್ದೇನೆ. ಎಷ್ಟು ಮಟ್ಟಿಗೆ ಸಾಧ್ಯವೊ ಅಷ್ಟು ಕಡಿಮೆ ಪ್ರವಾಸ ಹೋಗಬೇಕೆಂದು ಸೂಚನೆಗಳನ್ನು ಕೊಡರಾಗಿದೆ. ಅನೇಕ ಸಾರಿ ಕಮಿಟಿಗಳಿಗಾಗಿ ಹಾಗು ಕಾನ್‌ಫರೆನ್ಸ್‌ಗಳಿಗಾಗಿ ಪ್ರವಾಸ ಮಾಡಲೇಬೇಕಾಗುತ್ತದೆ. ಕೆಲವು ವೇಳೆ ದೆಹಲಿಗೂ ಪ್ರವಾಸ ಹೋಗಬೇಕಾಗಿ ಬರುತ್ತದೆ. ಅಯಾಯ ಪರಿಸ್ಥಿತಿಗೆ ಅನುಗುಣವಾಗಿ ಕೆಲಸ ಕಾರ್ಯಗಳು ನಡೆಯಬೇಕಾಗಿರುವುದರಿಂದ ಹೋಗಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ಪಕ್ಷದ ಸದಸ್ಯರು ಮಂತ್ರಿಗಳು ನಮ್ಮ ಕ್ಷೇತ್ರದಲ್ಲಿ ಪ್ರವಾಸ

ಮಾಡಬೇಕೆಂದು ಕೇಳುತ್ತಾರೆ. ಅಂತಹ ನಿಯೋಜಿತ ಕ್ಷೇತ್ರಗಳಲ್ಲಿ ಪ್ರವಾಸವನ್ನು ಕೈಗೊಳ್ಳಬೇಕಾಗುತ್ತದೆ. ಅಲ್ಲದೆ ನನ್ನ ಹತ್ತಿರ ಬಂದು ಕೆಲವು ಸದಸ್ಯರುಗಳು ತಮ್ಮ ಕ್ಷೇತ್ರಕ್ಕೆ ಬರಬೇಕೆಂದು ಕೇಳುತ್ತಾರೆ ಮತ್ತು ಪತ್ರಗಳನ್ನು ಬರೆಯುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ಪ್ರವಾಸ ಮಾಡಬೇಕಾಗಿ ಬರುತ್ತದೆ.

ನಮಗೆ ಪ್ರವಾಸ ಮಾಡಬೇಕು ಎನ್ನುವ ಇಷ್ಟ ಇರುತ್ತದೆ ಎನ್ನುವುದಲ್ಲ. ಪ್ರವಾಸ ಮಾಡುವ ಉದ್ದೇಶ ನಾವು ಜನತೆಯ, ರೈತರ ಪ್ರತಿನಿಧಿಗಳಾಗಿರುವುದರಿಂದ ಅಲ್ಲಿಗೆ ಹೋಗಿ ಬೇಕಾದಷ್ಟು ವಿಷಯಗಳನ್ನು ತಿಳಿದುಕೊಳ್ಳಬೇಕಾಗಿದೆ. ಎಲ್ಲರೂ ಇಲ್ಲಿಗೆ ಬರುವುದು ಸಾಧ್ಯವಿಲ್ಲ. ಈ ಪ್ರಜಾ ರಾಜ್ಯದಲ್ಲಿ ಪ್ರವಾಸ ಹೋಗತಕ್ಕದ್ದು ಅವಶ್ಯಕ. ಆದರೆ ಏನಾ ಕಾರಣವಾಗಿ ಪ್ರವಾಸ ಮಾಡಬೇಕು ಎನ್ನುವ ಧೋರಣೆ ಇಲ್ಲ. ಆದಷ್ಟುಮಟ್ಟಿಗೆ ಪ್ರವಾಸ ಕಡಿಮೆ ಮಾಡಬೇಕು ಎನ್ನುವುದೇ ನಮ್ಮ ಮನಸ್ಸಿನಲ್ಲಿ ಇದೆ.

(*Interruption*)

Mr. SPEAKER.—Sri V. N. Patil.....

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನಾನು ಎರಡು ಪ್ರಶ್ನೆ ಹಾಕಿದೆ. ಮಾನ್ಯ ಮುಖ್ಯ ಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಕೊಟ್ಟರು. ಇನ್ನೊಂದು ಪ್ರಶ್ನೆಗೆ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಚುನಾವಣಾ ಸಂದರ್ಭದಲ್ಲಿ ಸ್ಪೇಟ್ ಕಾರನ್ನು ದುರುಪಯೋಗಪಡಿಸಿಕೊಂಡಿರುವ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ.

ಶ್ರೀ ಎಸ್. ಚನ್ನಯ್ಯ.—ಸ್ವಾಮಿ, ಅವರು ಎರಡು ಪ್ರಶ್ನೆ ಹಾಕಿದರು. ಒಂದು ಪ್ರಶ್ನೆಗೆ ಉತ್ತರ ಕೊಟ್ಟರು. ಎರಡನೇ ಪ್ರಶ್ನೆಗೆ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿಲ್ಲ.

Mr. SPEAKER.—Hon. Chief Minister has given reply. It may not be satisfactory to the Hon. Member. The Chair cannot help it.

ಶ್ರೀ ಎಸ್. ಚನ್ನಯ್ಯ.—ಸ್ವಾಮಿ, ಅವರು ಯಾವ ತರಹ ಉತ್ತರ ಕೊಟ್ಟರೂ ಒಪ್ಪಿಕೊಂಡು ಬಿಡುತ್ತೇವೆ. ಆದರೆ ಅವರು ಯಾವ ತರಹ ಉತ್ತರವನ್ನೂ ಎರಡನೇ ಬಾರಿ ಪ್ರಶ್ನೆಗೆ ಕೊಟ್ಟಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಅವರು ಎರಡು ಪ್ರಶ್ನೆ ಹಾಕಿದರು. ಆದರೆ ಅದರಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಟ್ಟೆ. ಮಧ್ಯೆ ಸ್ವಲ್ಪಮಟ್ಟಿಗೆ ಇಂಟರಪ್ಷನ್ ಆಯಿತು. ಅಷ್ಟುಹೊತ್ತಿಗೆ ತಾವು ಇನ್ನೊಬ್ಬ ಸದಸ್ಯರನ್ನು ಕರೆದಿದ್ದುದರಿಂದ ನಾನು ಹಾಗೆಯೇ ಕುಳಿತುಕೊಂಡೆ. ಇನ್ನೊಂದು ಪ್ರಶ್ನೆಯನ್ನು ಅವಾಯಿಡ್ ಮಾಡಬೇಕು ಎನ್ನುವ ಉದ್ದೇಶ ಇಲ್ಲ.

ಅವರು ಎರಡನೇ ಪ್ರಶ್ನೆ ಏನು ಕೇಳಿದ್ದಾರೆ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಮುನಿಸಿಪಾಲಿಟಿ ಚುನಾವಣಾ ಸಂದರ್ಭದಲ್ಲಿ ಅಫಿಷಿಯಲ್ ಟೂರ್ ಹಾಕಿಕೊಂಡು ಸರ್ಕಾರದ ಕಾರನ್ನು ಉಪಯೋಗ ಮಾಡಿಕೊಂಡಿದ್ದಾರೆ ಎನ್ನುವಂಥ ಪ್ರಶ್ನೆ ಕೇಳಿದ್ದಾರೆ ಅವರಲ್ಲಿ ಏನಂತಿ ಮಾಡಿಕೊಳ್ಳುವುದು ಏನೆಂದರೆ ಇವಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಯಾವಾಗ ಎಲೆಕ್ಷನ್ ಆಯಿತು ಮತ್ತು ಅವರು ಯಾವಾಗ ಟೂರ್ ಮಾಡಿದ್ದಾರೆ ಆ ಟೂರ್ ಪ್ರೋಗ್ರಾಂನ್ನೂ ತರಿಸಿಕೊಂಡು ಅನಂತರ ಈ ಸಭೆಗೆ ಹೇಳುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ನ್ಯಾಯವಾಗಿ ನಡೆಯಬೇಕು ಎಂದು ಪ್ರತಿಪಾದಿಸುವಾಗ ಚುನಾವಣೆಗಳಿಗೆ 15 ದಿವಸ ಮೊದಲು ಯಾವ ಮಂತ್ರಿಗಳೂ ಚುನಾವಣೆಗಳು ನಡೆಯಬೇಕಾದ ಕ್ಷೇತ್ರಗಳಲ್ಲಿ ಪ್ರವಾಸ ಮಾಡುವುದಿಲ್ಲ ಎನ್ನುವ ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಈ ಹೊತ್ತು ಕೇಳುತ್ತಿದ್ದಾರೆ. ನಾವು ಏನು ಪ್ರವಾಸದ ಪದ್ಧತಿಯನ್ನು ಅನುಸರಿಸುತ್ತಿದ್ದೇವೆ ಬಹುಶಃ ಅದೇ ಪದ್ಧತಿಯನ್ನು ಕಾಂಗ್ರೆಸ್ಸೇತರ ಸರ್ಕಾರಗಳಿರುವ ರಾಜ್ಯದಲ್ಲಿ ಕೂಡ ಅನುಸರಿಸಲಾಗುತ್ತಿದೆ. ಕೇರಳದಲ್ಲಿ ಬೈ ಎಲೆಕ್ಷನ್ ಆದಾಗ ಅಲ್ಲಿಯ ಮಂತ್ರಿಗಳು ಪ್ರವಾಸ ಮಾಡಿದ್ದಾರೆ. ಅದೇ ರೀತಿಯಲ್ಲಿ ಮದ್ರಾಸ್ ರಾಜ್ಯದಲ್ಲಿ ಬೈ ಎಲೆಕ್ಷನ್ ಮತ್ತು ಕಾರ್ಪೊರೇಷನ್ ಚುನಾವಣೆಗಳು ನಡೆದಾಗ ಮಂತ್ರಿಗಳು ಹೋಗಿ ಪ್ರವಾಸ ಮಾಡಿದ್ದಾರೆ. ಯಾರೂ ಮಂತ್ರಿ ಪದವಿಯನ್ನು ಬಿಟ್ಟು ಹೋಗಿ ಪ್ರವಾಸ ಮಾಡಿಲ್ಲ. ನಮ್ಮ ರಾಷ್ಟ್ರದ ರಾಜ್ಯಗಳಲ್ಲಿ ಎಲ್ಲ ಕಡೆಯೂ ಬರೀ ಕಾಂಗ್ರೆಸ್ ಸರ್ಕಾರಗಳಿಲ್ಲ ; ಕಾಂಗ್ರೆಸ್ಸೇತರ ಸರ್ಕಾರಗಳೂ ಇವೆ. ಇಲ್ಲಿ ನಾವು ಏನು ಮಾಡುತ್ತಿದ್ದೇವೆಯೋ ಅದೇ ರೀತಿ ಅವರೂ ಮಾಡುತ್ತಿದ್ದಾರೆ.